# ಆಕಾಶವಾಣಿ, ದೂರದರ್ಶನ ಸರ್ಕಾರದ ಮುಖವಾಣಿ ಅಲ್ಲ

## ■ ಇವು ದೇಶದ ವಾರ್ತಾ ಸಂಸ್ಥೆಗಳು: ಸೂರ್ಯಪ್ರಕಾಶ್



**ಆಕಾಶವಾಣಿ-ದೂರದರ್ಶನ ಸಿಬ್ಬಂದಿಯ ದಕ್ಷಿಣ ವಲಯ ಸಮ್ಮೇಳನದಲ್ಲಿ ನಾಡೋಜ ಡಾ. ಮಹೇಶ್ ಜೋಶಿ ಅವರನ್ನು ಸನ್ಮಾನಿಸಲಾಯಿತು.**

**ಬೆಂಗಳೂರು:** ಆಕಾಶವಾಣಿ ಹಾಗೂ ದೂರದರ್ಶನ ಸರ್ಕಾರದ ಮುಖವಾಣಿಗಳಲ್ಲ. ಬದಲಾಗಿ ದೇಶದ ವಾರ್ತೆಗಳ ಪ್ರಸಾರದ ಸಂಸ್ಥೆಗಳು ಎಂದು ಪ್ರಸಾರ ಭಾರತಿ ಅಧ್ಯಕ್ಷ ಡಾ. ಎ. ಸೂರ್ಯಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ನಗರದಲ್ಲಿ ಏರ್ಪಡಿಸಿದ್ದ ಆಕಾಶವಾಣಿ-ದೂರದರ್ಶನ ಸಿಬ್ಬಂದಿಯ ದಕ್ಷಿಣ ವಲಯ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಆಕಾಶವಾಣಿ ಮತ್ತು ದೂರದರ್ಶನ ಎಂದಾಕ್ಷಣ ಅವು ಸರ್ಕಾರಿ ಸುದ್ದಿಗಳ ಮುಖವಾಣಿ ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಆದರೆ ಈ ಎರಡೂ ವಾರ್ತಾ ಸಂಸ್ಥೆಗಳು ದೇಶದ ವರ್ತಮಾನಗಳನ್ನು ಜನರಿಗೆ ತಲುಪಿಸುವ ಕೆಲಸದಲ್ಲಿ ತೊಡಗಿಸಿಕೊಂಡಿವೆ ಎನ್ನುವುದನ್ನು ನೆನಪಿಡಬೇಕು ಎಂದರು.

ಪ್ರಸಾರ ಭಾರತಿಯನ್ನು ಒಂದು ಸ್ವಾಯತ್ತ ಹಾಗೂ ವೃತ್ತಿಪರ ಸಂಸ್ಥೆಯನ್ನಾಗಿ ರೂಪಿಸಲು ಎಲ್ಲರೂ ಶ್ರಮಿಸಬೇಕು. ಇರುವ ಅವಕಾಶಗಳನ್ನು ಬಳಸಿಕೊಂಡು ಹೆಚ್ಚೆಚ್ಚು ಜನರಿಗೆ ತಲುಪುವ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ. ಪ್ರಸಾರ ಭಾರತಿಯನ್ನು ಹೊಸ ಪೀಳಿಗೆಯ ಅಶೋತ್ತರಗಳಿಗೆ ಸ್ಪಂದಿಸುವ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ದೃಷ್ಟಿಯಿಂದ ಹೊಸ ಮುಖಗಳು ಮತ್ತು ಪ್ರತಿಭೆಗಳು ಹೆಚ್ಚು ಅವಕಾಶ ಸಿಗುವಂತಾಗಬೇಕು ಎಂದು ಸಿಬ್ಬಂದಿಗೆ ಮನವರಿಕೆ ಮಾಡಿಕೊಟ್ಟರು.

ಪ್ರಸಾರ ಭಾರತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜವಾಹರ್ ಸರ್ಕಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ದೆಹಲಿ ದೂರದರ್ಶನ ಕೇಂದ್ರದ ಹೆಚ್ಚುವರಿ ಉಪಮಹಾನಿರ್ದೇಶಕ ಡಾ. ಮಹೇಶ್ ಜೋಶಿ ಮತ್ತಿತರರು ಇದ್ದರು.

# ‘ನೌಕರರ ಮನಸ್ಥಿತಿಯಿಂದ ಹೊರ ಬನ್ನಿ’



ಅಖಿಲ ಭಾರತ ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮ ಸಿಬ್ಬಂದಿ ಸಂಘ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾವೇಶದಲ್ಲಿ ಪ್ರಸಾರ ಭಾರತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜವಹರ್ ಸರ್ಕಾರ್ (ಎಡದಿಂದ ಮೊದಲನೆಯವರು) ಅವರು ಪ್ರಸಾರ ಭಾರತಿ ಅಧ್ಯಕ್ಷ ಡಾ.ಎ.ಸೂರ್ಯಪ್ರಕಾಶ್ ಅವರೊಂದಿಗೆ ಸಮಾಲೋಚನೆ ನಡೆಸಿದರು. ದೂರದರ್ಶನ ಉಪ ಮಹಾ ನಿರ್ದೇಶಕ ಮಹೇಶ್ ಜೋಶಿ, ಸಂಘದ ರಾಜ್ಯ ಕಾರ್ಯದರ್ಶಿ ಎ.ವಿ.ವಿನೋದ್ ಕುಮಾರ್ ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸ್ವಾಯತ್ತ ಮಾಧ್ಯಮ ಸಂಸ್ಥೆಯಾದ ಪ್ರಸಾರ ಭಾರತಿಯ ಸಿಬ್ಬಂದಿ ಸರ್ಕಾರಿ ನೌಕರರ ಮನಸ್ಥಿತಿಯಿಂದ ಹೊರಬಂದು ಮಾಧ್ಯಮ ಪ್ರತಿನಿಧಿಗಳ ಮನೋಭಾವ ರೂಢಿಸಿಕೊಳ್ಳಬೇಕಿದೆ’ ಎಂದು ಪ್ರಸಾರ ಭಾರತಿ ಅಧ್ಯಕ್ಷ ಡಾ.ಎ.ಸೂರ್ಯ ಪ್ರಕಾಶ್ ಅಭಿಪ್ರಾಯಪಟ್ಟರು.

ಅಖಿಲ ಭಾರತ ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮ ಸಿಬ್ಬಂದಿ ಸಂಘ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ‘ದಕ್ಷಿಣ ವಲಯ ಸಮಾವೇಶ’ ಉದ್ಘಾಟಿಸಿ ಅವರು ಮಾತನಾಡಿದರು.

‘1947 ರಿಂದ 1997ರ ವರೆಗೆ ಸರ್ಕಾರದ ಭಾಗವಾಗಿದ್ದ ಪ್ರಸಾರ ಭಾರತಿ ಸರ್ಕಾರಕ್ಕಾಗಿ ಕೆಲಸ ಮಾಡಿದೆ. 97ರಲ್ಲಿ ಜಾರಿಗೆ ಬಂದ ಪ್ರಸಾರ ಭಾರತಿ ಕಾನೂನಿನ ತರುವಾಯ ಸಂಸ್ಥೆಯು ಸರ್ಕಾರದ ಅಡಿಯಲ್ಲಿ ಉಳಿದಿಲ್ಲ. ವಿಶ್ವದಲ್ಲಿಯೇ ಅತಿದೊಡ್ಡದಾದ ಈ ಮಾಧ್ಯಮ ಸಂಸ್ಥೆಯ ಆಂತರಿಕ ಮತ್ತು ಬಾಹ್ಯ ಸ್ವರೂಪಗಳನ್ನು ಬದಲಾಯಿಸಬೇಕಿದೆ. ಮುಕ್ತ ಹಾಗೂ ಸೃಜನಶೀಲವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ತುರ್ತಿದೆ’ ಎಂದು ಹೇಳಿದರು.

‘ಪ್ರಸಾರ ಭಾರತಿ ಕಾನೂನು ಅನುಷ್ಠಾನಗೊಂಡರೂ ಅದು ಸಂಸ್ಥೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬಂದಿಲ್ಲ. ಆದ್ದರಿಂದಲೇ ರೇಡಿಯೊ ಮತ್ತು ದೂರದರ್ಶನಗಳು ಸರ್ಕಾರದ ಮುಖವಾಣಿಗಳು ಎಂಬ ಟೀಕೆಗಳನ್ನು ಎದುರಿಸಬೇಕಾಗಿ ಬಂದಿದೆ. ಆದ್ದರಿಂದ, ನಮ್ಮ ಸುದ್ದಿಮನೆಗಳ ಸ್ವರೂಪ ಬದಲಾಗಬೇಕಿದೆ. ನೇಮಕಾತಿ ಮಂಡಳಿ ರಚಿಸಿ ಯುವ ಪ್ರತಿಭಾವಂತರಿಗೆ ಮಣೆ ಹಾಕಬೇಕಿದೆ’ ಎಂದು ತಿಳಿಸಿದರು.

‘ಖಾಸಗಿ ಸುದ್ದಿ ಚಾನಲ್‌ಗಳಿಗೆ ಹೋಲಿಸಿದರೆ ದೂರದರ್ಶನದ ಗುಣಮಟ್ಟವನ್ನು ಉತ್ತಮಪಡಿಸಬೇಕಿದೆ. ಸರ್ಕಾರಿ ಸುದ್ದಿಗಳ ಬದಲಾಗಿ ನವನವೀನ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಹೊಸ ತಲೆಮಾರು ಸೇರಿದಂತೆ ಪ್ರತಿಯೊಬ್ಬರ ಮನಗೆಲ್ಲುವ ಕೆಲಸ ಮಾಡಬೇಕಿದೆ’ ಎಂದರು.

ಪ್ರಸಾರ ಭಾರತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜವಹರ್ ಸರ್ಕಾರ್ ಮಾತನಾಡಿ, ‘ಕಳೆದ 25 ವರ್ಷಗಳಿಂದ ಪ್ರಸಾರ ಭಾರತಿಯ ಸಿಬ್ಬಂದಿಗೆ ಬಡ್ತಿ ದೊರೆತಿಲ್ಲ. 30 ವರ್ಷಗಳ ಸೇವಾ ಅವಧಿಯಲ್ಲಿ ಒಂದೇ ಒಂದು ಬಡ್ತಿ ನೀಡಿದ ಉದಾಹರಣೆಗಳಿವೆ. ಕಳೆದ 20 ವರ್ಷದಿಂದ ಹೊಸಬರ ನೇಮಕವಾಗದೆ ಸಂಸ್ಥೆ ಸಿಬ್ಬಂದಿ ಕೊರತೆ ಎದುರಿಸುತ್ತಿದೆ’ ಎಂದು ತಿಳಿಸಿದರು.

‘2006ರಲ್ಲಿ ಡಿಡಿ ನ್ಯಾಷನಲ್ ಪ್ರಮುಖ ಸುದ್ದಿವಾಹಿನಿಯಾಗಿತ್ತು. ಅದು ಇಂದು ಎಂಟು ಪ್ರಮುಖ ವಾಹಿನಿಗಳ ಪೈಕಿ ಏಳನೇ ಸ್ಥಾನಕ್ಕೆ ತೃಪ್ತಿಪಡಬೇಕಾಗಿ ಬಂದಿದೆ. ಆಕಾಶವಾಣಿ ಕೂಡ ಬಹುದೊಡ್ಡ ಸವಾಲು ಎದುರಿಸುತ್ತಿದೆ. ಅನೇಕ ಖಾಸಗಿ ಕಂಪೆನಿಗಳು ಯುವ ಜನತೆಯನ್ನೇ ಗುರಿಯಾಗಿಸಿಕೊಂಡು ಎಫ್.ಎಂಗಳ ಮೂಲಕ ಗ್ರಾಮೀಣ ಪ್ರದೇಶಕ್ಕೂ ಲಗ್ಗೆ ಹಾಕುತ್ತಿವೆ’ ಎಂದರು.

**₹400ಕೋಟಿ ಆದಾಯ ₹1900 ಕೋಟಿ ವೆಚ್ಚ:** ‘₹ 400ಕೋಟಿ ಆದಾಯವಿರುವ ಆಕಾಶವಾಣಿಯ ನಿರ್ವಹಣೆಗೆ ₹1900 ಕೋಟಿ ವೆಚ್ಚವಾಗುತ್ತಿದೆ. ಮುಂದಿನ ಎರಡು ವರ್ಷಗಳಲ್ಲಿ ಆಕಾಶವಾಣಿ ಮೊಬೈಲ್ ಮೂಲಕ ದೇಶದ ಶೇ 70–80 ರಷ್ಟು ಜನರಿಗೆ ತಲುಪಿಸುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಬೇಕಿದೆ. ಆದ್ದರಿಂದ, ಸಂಪೂರ್ಣವಾಗಿ ಪ್ರಸಾರ ಭಾರತಿಗೆ ಹೊಸ ರೂಪ ನೀಡಬೇಕಿದೆ’ ಎಂದು ಜವಹರ್ ಸರ್ಕಾರ್ ಅಭಿಪ್ರಾಯಪಟ್ಟರು.

ಸಂಘದ ಅಧ್ಯಕ್ಷ ಆರ್.ಶ್ರೀನಿವಾಸನ್, ಸಮ್ಮೇಳನದ ಸಂಚಾಲಕ ಆರ್.ಟಿ. ಕುಲಕರ್ಣಿ ಉಪಸ್ಥಿತರಿದ್ದರು.

# ಆಕಾಶವಾಣಿ, ಡಿಡಿ ಸರ್ಕಾರದ ಮುಖವಾಣಿಯಲ್ಲ

- ಆಕಾಶವಾಣಿ, ದೂರದರ್ಶನ ಸಿಬ್ಬಂದಿಯ ದಕ್ಷಿಣ ವಲಯ ಸಮ್ಮೇಳನ
- ಪ್ರಸಾರ ಭಾರತಿಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ರೂಪಿಸಲು ಯೋಜನೆ

**ಬೆಂಗಳೂರು:** ಆಕಾಶವಾಣಿ ಅಥವಾ ದೂರದರ್ಶನಗಳು ಸರ್ಕಾರದ ಮುಖವಾಣಿಯಲ್ಲ ಎಂದು ಪ್ರಸಾರ ಭಾರತಿ ಅಧ್ಯಕ್ಷ ಡಾ.ಎ.ಸೂರ್ಯಪ್ರಕಾಶ್ ಹೇಳಿದ್ದಾರೆ.

ಈ ಹಿಂದೆ ಇಂಥ ಆರೋಪಗಳಿದ್ದವು. ಆದರೆ ಆ ದಿನಗಳೀಗ ಬದಲಾಗಿವೆ. ಒಂದು ಸ್ವಾಯತ್ತ ಸಂಸ್ಥೆ ಹೇಗೆ ಕೆಲಸ ಮಾಡಬೇಕೋ ಅದೇ ರೀತಿಯಲ್ಲಿ ಆಕಾಶವಾಣಿ ಹಾಗೂ ದೂರದರ್ಶನವೂ ಕೆಲಸ ಮಾಡುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ. ಈ ಸಂಸ್ಥೆಗಳು ಜನರಿಗೆ ಸುದ್ದಿ ನೀಡುವ ಸಂಸ್ಥೆಗಳಾಗಿವೆ ಎಂದು ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಆಕಾಶವಾಣಿ-ದೂರದರ್ಶನ ಸಿಬ್ಬಂದಿಯ ದಕ್ಷಿಣ ವಲಯ ಸಮ್ಮೇಳನದಲ್ಲಿ ತಿಳಿಸಿದರು.

ಪ್ರಸಾರ ಭಾರತಿಯನ್ನು ಒಂದು ಸ್ವಾಯತ್ತ ಹಾಗೂ ವೃತ್ತಿಪರ ಸಂಸ್ಥೆಯನ್ನಾಗಿ ರೂಪಿಸಲು ಅವಕಾಶವಿದೆ. ಕಾನೂನಿನಲ್ಲಿ ಈಗಾಗಲೇ ಪ್ರಸಾರ ಭಾರತಿಯನ್ನು ಸ್ವಾಯತ್ತ ಸಂಸ್ಥೆ ಎಂದೇ ಗುರುತಿಸಲಾಗಿದೆ. ಹೊಸ ಪೀಳಿಗೆಯ ಆಶೋತ್ತರಗಳಿಗೆ ಪ್ರಸಾರ ಭಾರತಿ ಸ್ಪಂದಿಸಬೇಕು. ಈ ಹಿನ್ನೆಲೆಯಲ್ಲಿ ಹೊಸ ಪ್ರತಿಭೆಗಳಿಗೆ ಹೆಚ್ಚು ಅವಕಾಶ ಸಿಗುವಂತಾಗಬೇಕು ಎಂದರು.

ಆಧುನಿಕ ಮಾಧ್ಯಮ ಎಷ್ಟೇ ಬೆಳೆದಿದ್ದರೂ ಆಕಾಶವಾಣಿಗೆ ತನ್ನದೇ ಗೌರವ ಹಾಗೂ ಬೆಲೆಯಿದೆ. ಆಕಾಶವಾಣಿ ಬಗ್ಗೆ ಇಂದಿಗೂ ಶ್ರೋತೃಗಳಿಗೆ ಆಕರ್ಷಣೆಯಿದೆ. ಆದರೆ ಇಂದಿನ ತಂತ್ರಜ್ಞಾನ




ಆಕಾಶವಾಣಿ-ದೂರದರ್ಶನ ಸಿಬ್ಬಂದಿಯ ದಕ್ಷಿಣ ವಲಯ ಸಮ್ಮೇಳನಕ್ಕೆ ಪ್ರಸಾರ ಭಾರತಿ ಅಧ್ಯಕ್ಷ ಡಾ.ಎ.ಸೂರ್ಯಪ್ರಕಾಶ್ ಚಾಲನೆ ನೀಡಿದರು. ಪ್ರಸಾರಭಾರತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜವಾಹರ್ ಸರ್ಕಾರ್, ದೂರದರ್ಶನದ ಹೆಚ್ಚುವರಿ ಉಪ ಮಹಾನಿರ್ದೇಶಕ ನಾಡೋಜ ಡಾ.ಮಹೇಶ್ ಜೋಶಿ ಉಪಸ್ಥಿತರಿದ್ದರು.

ಬಳಸಿಕೊಂಡು ಪ್ರತಿ ಮೊಬೈಲ್‌ಗಳಲ್ಲಿಯೂ ಆಕಾಶವಾಣಿ ಸಿಗುವಂತೆ ಮಾಡಬೇಕು. ಆಗ ಆಕಾಶವಾಣಿಯನ್ನು ಮಾಹಿತಿ ತಂತ್ರಜ್ಞಾನ ಹಾಗೂ ಸಾಮಾಜಿಕ ಮಾಧ್ಯಮ ಸ್ನೇಹಿಯನ್ನಾಗಿ ಮಾಡಬೇಕು ಎಂದು ಪ್ರಸಾರಭಾರತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜವಾಹರ್ ಸರ್ಕಾರ್ ಅಭಿಪ್ರಾಯಪಟ್ಟರು.

# ಆಕಾಶವಾಣಿ, ದೂ.ದಕ್ಕೆ ಅನುಭವಿಗಳ ನೇಮಕ

**ಬೆಂಗಳೂರು, ಜ. 9:** ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಲ್ಲಿ ಸೃಜನಶೀಲತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅನುಭವವುಳ್ಳ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಪ್ರಸಾರ ಭಾರತಿ ಅಧ್ಯಕ್ಷ ಡಾ. ಎ.ಸೂರ್ಯ ಪ್ರಕಾಶ್ ತಿಳಿಸಿದರು.

ಆಲ್ ಇಂಡಿಯಾ ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮ ಸಿಬ್ಬಂದಿ ಸಂಘ ಹಮ್ಮಿಕೊಂಡಿದ್ದ 'ಆಕಾಶವಾಣಿ ಮತ್ತು ದೂರದರ್ಶನ ದಕ್ಷಿಣ ವಲಯ ಸಮ್ಮೇಳನ'ದಲ್ಲಿ ಮಾತನಾಡಿದ ಅವರು, ಆಧುನಿಕತೆಯ ಜಾಯಮಾನದಲ್ಲಿ ನಾವಿಂದು ಸಂಚರಿಸುತ್ತಿದ್ದೇವೆ. ಇಲ್ಲಿ ಹೊಸತನ ಹೊಸ ಹೊಸ ವಿಷಯ ವಿಚಾರಗಳನ್ನು ಕೇಳುಗರಿಗೆ ತಲುಪಿಸಬೇಕು. ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮಗಳಲ್ಲಿ ಸೃಜನಶೀಲತೆ ಕಾಣುತ್ತಿಲ್ಲ. ಇದಕ್ಕೆ ಕಾರಣ 56 ವರ್ಷ ವಯೋಮಿತಿ ಹೊಂದಿದವರನ್ನು ನೇಮಕ ಮಾಡಿಕೊಳ್ಳುತ್ತಿರುವುದು. ಈ ಹಿನ್ನೆಲೆಯಲ್ಲಿ ಯುವ ಚೈತನ್ಯವುಳ್ಳ ಪತ್ರಕರ್ತರು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

### ಡಿಆರ್‌ಎಂ ತಂತ್ರಜ್ಞಾನ ಅಳವಡಿಕೆ

ಆಕಾಶವಾಣಿಯ ಕೆಲ ಪ್ರಾಥಮಿಕ ರೇಡಿಯೋ ಚಾನೆಲ್‌ಗಳು ಸ್ಪಷ್ಟವಾಗಿ ಕೇಳುಗರಿಗೆ ತಲುಪುತ್ತಿಲ್ಲ. ಗ್ರಾಮೀಣ ಪ್ರದೇಶದವರೆಗೂ ವಾಹಿನಿ ಮುಟ್ಟಿಸುವ ಮಹತ್ತರ ಕಾರ್ಯವಾಗಿದೆ. ಆದರೆ, ಶಬ್ದ ಸ್ಪಷ್ಟತೆ ಇಲ್ಲ. ಈ ಸಮಸ್ಯೆ ನಿವಾರಿಸಲು ನೂತನ ತಂತ್ರಜ್ಞಾನವಾದ ಡಿಆರ್ ಎಂ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ. ಇದು ಬಹುದೂರದವರೆಗೆ ಸ್ಪಷ್ಟ ಮತ್ತು ನಿಖರವಾಗಿ ಶಬ್ದ ತಲುಪಿಸುವುದರ ಜತೆಗೆ ಸುಲಲಿತವಾಗಿ ಉತ್ತಮ ಆಹ್ಲಾದಕರ ಅನುಭವ ನೀಡುತ್ತದೆ ಎಂದು ತಿಳಿಸಿದರು.

### ಮೋದಿಯವರ ಉತ್ಸಾಹ

ಮೊದಲ ಬಾರಿಗೆ ಪ್ರಧಾನ ಮಂತ್ರಿಯಾಗಿರುವ ನರೇಂದ್ರ ಮೋದಿಯವರು ತುಂಬಾ ಉತ್ಸಾಹಿಗಳಾಗಿದ್ದಾರೆ. ಕೈಗಾರಿಕೆ, ಕೃಷಿ, ಶಿಕ್ಷಣ ಕ್ಷೇತ್ರಗಳ ಅಭಿವೃದ್ಧಿಯ ಜತೆಗೆ ತಂತ್ರಜ್ಞಾನದ ಬೆಳವಣಿಗೆಗೆ ವಿವಿಧ ಯೋಜನೆಗಳನ್ನು ರೂಪಿಸಿದ್ದಾರೆ. ಪ್ರಸಾರ ಭಾರತಿ, ಆಕಾಶವಾಣಿ, ದೂರದರ್ಶನಗಳ ಅಭಿವೃದ್ಧಿಗೆ ಹೆಚ್ಚಿನ ಒಲವು ತೋರಿದ್ದು, ಹೊಸ ಹೊಸ ತಂತ್ರಜ್ಞಾನಗಳ ಅಳವಡಿಕೆ ಒತ್ತು ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

### ನೇಮಕದಲ್ಲಿ ಬದ್ಧತೆ ಇರಲಿ

ಪ್ರಸಾರ ಭಾರತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜವಾಹರ್ ಸರ್ಕಾರ್ ಮಾತನಾಡಿ, ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟ ಅನುಭವಿಗಳನ್ನು ನೇಮಕ ಮಾಡಿಕೊಂಡರೆ ಉತ್ತಮ ಸೃಜನಶೀಲ ಕಾರ್ಯಕ್ರಮಗಳನ್ನು ನೀಡಲು ಸಾಧ್ಯ. ಅನುಭವವಿಲ್ಲದ ಇತರೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದವರನ್ನು ಪ್ರಸಾರ ಭಾರತಿ ಮುಖ್ಯಸ್ಥಾನ ನೀಡುವುದು ಸಮಂಜಸವಲ್ಲ. ಸುದ್ದಿ ಬಗ್ಗೆ ಅನುಭವವುಳ್ಳವರನ್ನು ನೇಮಕ ಮಾಡಿಕೊಳ್ಳುವುದರ ಮೂಲಕ ನೇಮಕಾತಿಯಲ್ಲಿ ಬದ್ಧತೆ ಅನುಸರಿಸಬೇಕು ಎಂದು ತಿಳಿಸಿದರು. ದೂರದರ್ಶನ ಹೆಚ್ಚುವರಿ ನಿರ್ದೇಶಕ ಮಹೇಶ್ ಜೋಷಿ, ಅಸೋಸಿಯೇಷನ್ ಅಧ್ಯಕ್ಷ ಆರ್. ಶ್ರೀನಿವಾಸನ್, ಆರ್.ಟಿ.ಕುಲಕರ್ಣಿ, ಎ.ವಿ.ವಿನೋದ ಕುಮಾರ, ಪಂಕಜ್ ಪಟ್ನಾಯಕ್ ಉಪಸ್ಥಿತರಿದ್ದರು.



ನಗರದಲ್ಲಿ ನಡೆದ ಆಕಾಶವಾಣಿ ಮತ್ತು ದೂರದರ್ಶನ ದಕ್ಷಿಣ ವಲಯ ಸಮ್ಮೇಳನವನ್ನು ಪ್ರಸಾರ ಭಾರತಿ ಅಧ್ಯಕ್ಷ ಡಾ. ಎ.ಸೂರ್ಯ ಪ್ರಕಾಶ್ ಉದ್ಘಾಟಿಸಿದರು. ಪ್ರಸಾರ ಭಾರತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜವಾಹರ್ ಸರ್ಕಾರ್, ದೂರದರ್ಶನ ಹೆಚ್ಚುವರಿ ನಿರ್ದೇಶಕ ಮಹೇಶ್ ಜೋಷಿ, ಅಸೋಸಿಯೇಷನ್ ಅಧ್ಯಕ್ಷ ಆರ್.ಶ್ರೀನಿವಾಸನ್, ಆರ್.ಟಿ. ಕುಲಕರ್ಣಿ, ಎ.ವಿ.ವಿನೋದ ಕುಮಾರ, ಪಂಕಜ್ ಪಟ್ನಾಯಕ್ ಇದ್ದರು.